ದಿನಾಂಕಃ 28.03.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ.ಟಿ.ಎಸ್.ಆರ್ ರವರಿಂದ

ಶೇಷಗಿರಿಯಪ್ಪನವರು ಮೊದಲಿಂದಲೂ ನನಗೆ ಸಂಬಂಧಿಕರಾಗಿರುವುದರಿಂದ ನನಗೆ ಅವರ ಮನೆಯ ಹಾಗೂ ಆಸ್ತಿಯ ವಿಚಾರಗಳು ಗೊತ್ತಿತ್ತು ಎಂದರೆ ಸಾಕ್ಷಿ ಅಷ್ಟಾಗಿ ಗೊತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ದಾಖಲೆಗಳನ್ನು ಪರಿಶೀಲಿಸಿ ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತು ಮೃತ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ದಾವಾ ಸ್ವತ್ತು ಖಾಲಿ ಜಾಗ. ದಾವಾ ಸ್ವತ್ತಿನ ಪಕ್ಕದಲ್ಲಿ ರಕ್ತೇಶ್ವರಿ ದೇವಸ್ಥಾನ ಇದೆ. ರಕ್ತೇಶ್ವರಿ ದೇವರು ಶೇಷಗಿರಿಯಪ್ಪನವರ ಹಾಗೂ ನಮ್ಮ ಮನೆತನದ ದೇವರು ಎಂದರೆ ಸರಿ. ಸಾಕ್ಷಿ ಮುಂದುವರೆದು ಶೇಷಗಿರಿಯಪ್ಪನವರ ಮನೆಯವರು ಯಾರು ದೇವಸ್ಥಾನಕ್ಕೆ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಎಲ್ಲಾ ಪ್ರತಿವಾದಿಯವರು ಹಾಗೂ ವಾದಿ ಇಂದಿಗೂ ರಕ್ತೇಶ್ವರಿ ದೇವಸ್ಥಾಕ್ಕೆ ನಡೆದುಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಶೇಷಗಿರಿಯಪ್ಪನವರಿಗೆ ಮನ್ಸಿಪಾಲಿಟಿಯಿಂದ ಬಂದ ನೋಟೀಸಿನ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಶೇಷಗಿರಿಯಪ್ಪನವರ ಎಲ್ಲಾ ಮಕ್ಕಳಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ತೆಗೆದುಕೊಳ್ಳುವ ಸಮಯದಲ್ಲಿ ಗಣಪತಿ ಬ್ಯಾಂಕ್ ನಿಂದ ಹರಾಜಿಗೆ ಬಂದಿತ್ತು ಎಂದು ಉತ್ತರಿಸುತ್ತಾರೆ. ಶೇಷಗಿರಿಯಪ್ಪನವರ ಆಸ್ತಿಯ ಬಗ್ಗೆ ನನಗೆ ಗೊತ್ತಿದ್ದರೂ ಉಳಿದವರ ಹಕ್ಕಿಗೆ ಮೋಸ ಮಾಡುವ ಉದ್ದೇಶದಿಂದ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶೇಷಗಿರಿಯಪ್ಪನವರ ವೈದಿಕವನ್ನು ಹಾಗೂ ಅವರ ಹಿರಿಯವ ವೈದಿಕವನ್ನು ವಾದಿ ಹಾಗೂ ಪ್ರತಿವಾದಿಗಳು ಸೇರಿಕೊಂಡು ದಾವಾ ಸ್ವತ್ತಿನ ಮನೆಯಲ್ಲೇ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮೂಲ ಊರು ಶಿವಮೊಗ್ಗ. ನಾನು ಸಾಗರದಲ್ಲಿ ಎಸ್ ನಗರ, ಮೊದಲನೇ ತಿರುವಿನಲ್ಲಿ 30 ವರ್ಷಗಳಿಂದ ವಾಸವಾಗಿದ್ದೇನೆ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಉಳಿಕೆ ಪ್ರತಿವಾದಿಗಳ ಹಕ್ಕು ಇದ್ದರೂ ನಾನು ಖರೀದಿ ಮಾಡಿರುವುದರಿಂದ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಬಂದಿರುವುದಿಲ್ಲ ಎಂದರೆ ಸಾಕ್ಷಿ ಅದು ಗಣಪತಿ ಬ್ಯಾಂಕ್ ನಲ್ಲಿ ಹರಾಜಿಗೆ ಬಂದಿದ್ದರಿಂದ ಮಾನವೀಯತೆ ದೃಷ್ಟಿಯಿಂದ ಹರಾಜಾಗಬಾರದು ಎಂದು ನಾನು ಖರೀದಿಸಿರುತ್ತೇನೆ ಎಂದು

ಉತ್ತರಿಸುತ್ತಾರೆ. ಯಾರಿಗೆ ಹಕ್ಕು ಇದೆ ಇಲ್ಲ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ದಾಖಲೆಗಳನಲ್ಲಿ ಮೃತ 1 ನೇ ಪ್ರತಿವಾದಿಯ ಹೆಸರು ಇತ್ತು ಎಂದು ಉತ್ತರಿಸುತ್ತಾರೆ. ನಾನು ನಿಜವಾದ ಪ್ರತಿಫಲ ನೀಡಿ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ